# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 26-11-2021 ರ ಶುಕ್ರವಾರದಂದು ಮಧ್ಯಾಹ್ನ 12-30 ಗಂಟೆಗೆ ನಡೆದ "ಸಿಂಡಿಕೇಟಿನ ವಿಶೇಷ ಸಭೆ"ಯ ನಡವಳಿ.

ಹಾಜರಿದ್ದ ಸದಸ್ಯರುಗಳು:

1. ಪ್ರೊ. ಜಿ.ಹೇಮಂತಕುಮಾರ್ — ಕುಲಪತಿಗಳು ಹಾಗೂ ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. — ಸದಸ್ಯರು
3. ಪ್ರೊ. ರಮೇಶ್ — ಸದಸ್ಯರು
4. ಶ್ರೀ ಎಂ.ಬಿ. ಗಪ್ಪಣ್ಣ — ಸದಸ್ಯರು
5. ಡಾ. ಚೈತ್ರ ನಾರಾಯಣ — ಸದಸ್ಯರು
6. ಡಾ. ಸೈಯದ್ ಕಾರ್ಝು ಮೊಹಿದ್ದೀನ್
7. ಡಾ. ವೆಂಕಟೇಶಯ್ಯ — ಸದಸ್ಯರು
8. ಡಾ. ನಾಗರಾಜು — ಸದಸ್ಯರು
9. ಡಾ. ಬಿ.ರಾಜಣ್ಣ — ಸದಸ್ಯರು
10. ಡಾ. ವೆಂಕಟೇಶ್ ಜೆ ಎನ್ — ಸದಸ್ಯರು
11. ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ — ಸದಸ್ಯರು
12. ಶ್ರೀ ಎಸ್.ಡಿ.ದೊಡ್ಡಚಾರಿ — ಸದಸ್ಯರು
13. ಶ್ರೀಮತಿ ವೈ.ಕೆ.ಪವಿತ್ರ — ಸದಸ್ಯರು
14. ಡಾ. ಈ.ಸಿ.ನಿಂಗರಾಜ್ ಗೌಡ — ಸದಸ್ಯರು
15. ಡಾ. ಎಂ.ಎಸ್.ದಾಮೋದರ — ಸದಸ್ಯರು
16. ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) — ಸದಸ್ಯರು
17. ಡಾ. ಸಂಗೀತಾ ಗಜಾನನ್ ಭಟ್, ಹಣಕಾಸು ಅಧಿಕಾರಿಗಳು — ಸದಸ್ಯರು
18. ಪ್ರೊ. ಆರ್.ಶಿವಪ್ಪ — ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ

ಹಾಜರಾಗದ ಸದಸ್ಯರು:

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ವಿಶೇಷ ಸಭೆ-01 | ಯುವರಾಜ ಕಾಲೇಜಿನಲ್ಲಿ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿಯ ಬಗ್ಗೆ. |
| | ಯುವರಾಜ ಕಾಲೇಜಿನಲ್ಲಿ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿ ಅವಧಿಯು ದಿನಾಂಕ 16-10-2021 ರಂದು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಯುವರಾಜ ಕಾಲೇಜಿನ ಆದೇಶ ಪತ್ರ ದಿನಾಂಕ 16-10-2021ರಲ್ಲಿ ಸದರಿ ಅಧ್ಯಾಪಕರುಗಳನ್ನು ಸೇವೆಯಿಂದ ಬಿಡುಗಡೆಗೊಳಿಸಲಾಗಿತ್ತು. ಈ ನಡುವೆ ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜ ಭವನ, ಬೆಂಗಳೂರು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಮತ್ತು ಕಾಲೇಜುಗಳ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ಅಧ್ಯಾಪಕರುಗಳ ಸಂಘ(ರಿ) ಮತ್ತು ಶ್ರೀ.ಎಂ.ಎಸ್.ಉಮಾಪತಿ, ವಕೀಲರು ಇವರುಗಳು ತಮ್ಮ ಪತ್ರಗಳಲ್ಲಿ ಸದರಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ಸೇವೆಯನ್ನು ಮುಂದುವರೆಸಬಾರದೆಂದು ಮತ್ತು ಬಿಡುಗಡೆಗೊಳಿಸಬೇಕೆಂದು ತಿಳಿಸಿರುವ ಅಂಶವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ತರುತ್ತಾ, ಪ್ರಸ್ತುತ ಅಧ್ಯಾಪಕರುಗಳನ್ನು ಸೇವೆಯಿಂದ ಬಿಡುಗಡೆಗೊಳಿಸಿರುವ ಆದೇಶಕ್ಕೆ ಸದರಿ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ತಾತ್ಕಾಲಿಕ ಅಧ್ಯಾಪಕರು ತಡೆಯಾಜ್ಞೆಯನ್ನು ತಂದಿರುವುದಾಗಿ ತಿಳಿಸಿ ಅದರ ಪ್ರತಿಯನ್ನು ಲಗತ್ತಿಸಿ ಸೇವೆಯನ್ನು ಮುಂದುವರೆಸುವಂತೆ ಕೋರಿರುತ್ತಾರೆ.<br><br>ಯುವರಾಜ ಕಾಲೇಜಿನಲ್ಲಿ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿಗೆ ಸಂಬಂಧಿಸಿದಂತೆ ಸಿಂಡಿಕೇಟ್ ಸದಸ್ಯರು ಸುದೀರ್ಘವಾಗಿ ಚರ್ಚಿಸಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳು (ಅರ್ಜಿದಾರರು) ಘನ ಉಚ್ಛನ್ಯಾಯಾಲಯದ ದಾರಿ ತಪ್ಪಿಸಿದ್ದಾರೆ ಎಂದು ಪ್ರೊ.ರಮೇಶ್, ಕಾನೂನು ನಿಕಾಯದ ಡೀನರು, ಶ್ರೀ ದೊಡ್ಡಚಾರಿ, ಶ್ರೀ ಗಪ್ಪಣ, ಶ್ರೀ ಪ್ರದೀಪಕುಮಾರ್ ದೀಕ್ಷಿತ, ಡಾ. ದಾಮೋದರ್, ಡಾ.ನಿಂಗರಾಜೇಗೌಡ ಮತ್ತು ಡಾ. ಚೈತ್ರ ನಾರಾಯಣ ಸಭೆಗೆ ತಿಳಿಸಿದರು ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ವತಿಯಿಂದ ವಕೀಲರು ತೀವ್ರ ಆಕ್ಷೇಪಣೆ ಸಲ್ಲಿಸಬೇಕೆಂದು ಸಲಹೆ ನೀಡಿದರು. ಪ್ರೊ.ರಮೇಶ್, ಡೀನರು, ಕಾನೂನು ನಿಕಾಯ, ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳ ಇವರ ಅನುಪಸ್ಥಿತಿಯಲ್ಲಿ ವಿಶ್ವವಿದ್ಯಾನಿಲಯವು ಹೊಸ ನೇಮಕಾತಿಗಳನ್ನು ಮಾಡಬಹುದು ಎಂದು ತಿಳಿಸಿದರು.<br><br>ಕಾನೂನು ಸಲಹೆಗಾರರು ಮಾತನಾಡಿ ನ್ಯಾಯಾಲಯವು ಮಧ್ಯಂತರ ಆದೇಶವನ್ನು ನೀಡಿರುವುದರಿಂದ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ಬಿಡುಗಡೆಗೊಳಿಸಲು ಸಾಧ್ಯವಿಲ್ಲ ಆ ರೀತಿ ಮಾಡಿದ್ದಲ್ಲಿ ನ್ಯಾಯಾಲಯದ ನಿಂದನೆಗೆ ಒಳಪಡಬೇಕಾಗುತ್ತದೆ ಹಾಗೂ ಈ ವಿಷಯವನ್ನು ಘನ ಉಚ್ಛನ್ಯಾಯಾಲಯದಲ್ಲಿ ಪ್ರಸ್ತಾಪಿಸಲು ಮೈಸೂರು ವಿಶ್ವವಿದ್ಯಾನಿಲಯದ ಪರವಾಗಿ ಹಿರಿಯ ಕಾನೂನು ಸಲಹೆಗಾರರ ಜೊತೆ ಚರ್ಚಿಸಲಾಗಿದೆ ಎಂದು ಸಭೆಗೆ ತಿಳಿಸಿದರು. |
| ತೀರ್ಮಾನ | ನ್ಯಾಯಾಲಯವು ಮಧ್ಯಂತರ ಆದೇಶವನ್ನು ನೀಡಿರುವುದರಿಂದ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ಬಿಡುಗಡೆಗೊಳಿಸಲು ಸಾಧ್ಯವಿಲ್ಲ. ಈಗಾಗಲೇ ನೀಡಿರುವ ಆದೇಶವನ್ನು ಹಿಂಪಡೆದು ಅವರನ್ನು ಮುಂದಿನ ನ್ಯಾಯಾಲಯದ ಆದೇಶ ಬರುವವರೆಗೆ ಯಥಾಸ್ಥಿತಿಯಲ್ಲಿ ಮುಂದುವರೆಸಲು ಸಭೆಯು ತೀರ್ಮಾನಿಸಿತು. |

| | |
|---|---|
| ವಿಶೇಷ ಸಭೆ-02 | ಕು. ಕುಸುಮ.ಎ., ಸಂಸ್ಕೃತ ಅಧ್ಯಯನ ವಿಭಾಗದ ಹಳೆಯ ವಿದ್ಯಾರ್ಥಿ, ಮಾನಸಗಂಗೋತ್ರಿ, ಮೈಸೂರು ಇವರು ವಿಶ್ವವಿದ್ಯಾನಿಲಯಕ್ಕೆ ನೀಡಿರುವ ದೂರಿನ ಕುರಿತು ವಿಚಾರಣೆ ನಡೆಸಿದ್ದು, ವರದಿಯನ್ನು ಘನ ಉಚ್ಚನ್ಯಾಯಾಲಯಕ್ಕೆ ಸಲ್ಲಿಸುವ ಬಗ್ಗೆ. |
| ತೀರ್ಮಾನ | ಕು.ಕುಸುಮ ಎ, ಸಂಸ್ಕೃತ ಅಧ್ಯಯನ ವಿಭಾಗದ ಹಳೆಯ ವಿದ್ಯಾರ್ಥಿ, ಮಾನಸಗಂಗೋತ್ರಿ, ಮೈಸೂರು ಇವರು ವಿಶ್ವವಿದ್ಯಾನಿಲಯಕ್ಕೆ ನೀಡಿರುವ ದೂರಿನ ಕುರಿತು ವಿಚಾರಣೆ ನಡೆಸಿದ್ದು ಸಮಗ್ರ ವರದಿಯನ್ನು ಘನ ಉಚ್ಚನ್ಯಾಯಾಲಯಕ್ಕೆ ದಿನಾಂಕ 15-12-2021ರೊಳಗೆ ಸಲ್ಲಿಸಬೇಕಾಗಿರುವುದರಿಂದ ಈ ವಿಷಯವನ್ನು ಸಿಂಡಿಕೇಟ್ ಸದಸ್ಯರ ಗಮನಕ್ಕೆ ತರಲಾಯಿತು. ಸಭೆಯು ಇದನ್ನು ಗಮನಿಸಿತು. |

## ಮಾನ್ಯ ಕುಲಪತಿಯವರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು

| ಕ್ರ.ಸಂ. | ವಿಷಯ ಸಂಕ್ಷಿಪ್ತವಾಗಿ |
|---|---|
| 1 | ವ್ಯಾಸ ವಾಲ್ಮೀಕಿ ಪೀಠದ ಬಗ್ಗೆ. |
| | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಇವರು ಮಾತನಾಡಿ, ವ್ಯಾಸ ವಾಲ್ಮೀಕಿ ಪೀಠ ಸ್ಥಾಪನೆಯ ಬಗ್ಗೆ ಒಂದು ವರ್ಷದ ಹಿಂದೆಯೇ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನವಾಗಿದ್ದು, ಇದುವರೆವಿಗೂ ಅನುಷ್ಠಾನಗೊಂಡಿರುವುದಿಲ್ಲವೆಂದು ತಿಳಿಸಿದರು. |
| | ಮಾನ್ಯ ಕುಲಪತಿಯವರು ಮಾತನಾಡಿ, ಪ್ರಸ್ತುತ ಪ್ರೊ.ರಾಮಶೇಷು ಅವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಿದ್ದು, ಕನ್ನಡ ವಿಭಾಗದ ಸಹಯೋಗದೊಂದಿಗೆ ರಾಧಕೃಷ್ಣ ತಾತ್ವಿಕ ಕೇಂದ್ರದಲ್ಲಿ ಪ್ರಾರಂಭ ಮಾಡಲು ಪ್ರಬಂಧ ಸಿದ್ಧಪಡಿಸುವುದಕ್ಕೆ ಆದೇಶಿಸಿದ್ದೇನೆ ಎಂದು ಸ್ಪಷ್ಟೀಕರಿಸಿದರು. |
| 2 | ಚಾಮರಾಜನಗರದ ಹಳೆಯ ವಿದ್ಯಾರ್ಥಿನಿಲಯದ ಕಾಮಗಾರಿ ಅಪೂರ್ಣಗೊಂಡಿರುವ ಬಗ್ಗೆ. |
| | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಇವರು ಮಾತನಾಡಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಚಾಮರಾಜನಗರದ ಹಳೆಯ ವಿದ್ಯಾರ್ಥಿನಿಲಯದಲ್ಲಿ ಕಾಮಗಾರಿ ಕೈಗೊಂಡು ಪೂರ್ಣಗೊಳಿಸಬೇಕೆಂದು ವರ್ಷದ ಹಿಂದೆಯೇ ಮನವಿ ಸಲ್ಲಿಸಿದ್ದೆ. ಆದರೆ, ಇದುವರೆವಿಗೂ ಪೂರ್ಣಗೊಂಡಿರುವುದಿಲ್ಲ. ನನಗೆ ತಿಳಿದಮಟ್ಟಿಗೆ ಬಿಲ್ ಮಾಡಿಕೊಂಡಿರುತ್ತಾರೆ. ಈ ಸಂಬಂಧ ವಿಚಾರಣೆ ಮಾಡಿದ್ದಾಗ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸ್ವಚ್ಛಗೊಳಿಸಲಾಗುವುದೆಂದು ತಿಳಿಸಿದರು. ಅದು ಸಹ ಅರ್ಧಂಬರ್ಧ ಸ್ವಚ್ಛಗೊಳಿಸಿದ್ದಾರೆಂದು ಸಭೆಯ ಗಮನಕ್ಕೆ ತಂದರು. |
| | ಮಾನ್ಯ ಕುಲಪತಿಯವರು ಮಾತನಾಡಿ, ಈ ಸಂಬಂಧ ಇಂಜಿನಿಯರಿಂಗ್ ವಿಭಾಗಕ್ಕೆ ಪತ್ರ ಬರೆದಿರುತ್ತಾರೆ. ಇಂಜಿನಿಯರಿಂಗ್ ವಿಭಾಗಕ್ಕೆ ನೀಡಿರುವ ಆದೇಶವನ್ನು ಪರಿಶೀಲಿಸಿ, ಮಾಹಿತಿ ಒದಗಿಸಲಾಗುವುದೆಂದು ತಿಳಿಸಿದರು. |
| 3 | ಚಾಮರಾಜನಗರ ಕೇಂದ್ರದ ವಾರ್ಷಿಕ ದಾಸ್ತಾನು ಪರಿಶೀಲನೆಯ ಬಗ್ಗೆ. |
| | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಇವರು ಮಾತನಾಡಿ, ಚಾಮರಾಜನಗರ ಕೇಂದ್ರದಲ್ಲಿರುವ ಐಟಂಗಳ ದಾಸ್ತಾನಿನ ಬಗ್ಗೆ ಲೆಕ್ಕವಿರುವುದಿಲ್ಲ. ಈ ಸಂಬಂಧ ಉಪ ಕುಲಸಚಿವರು ಹಾಗೂ ಎಸ್ಟೇಟ್ ಆಫೀಸರ್ ಅವರುಗಳನ್ನೊಳಗೊಂಡಂತೆ ದಾಸ್ತಾನು ಪರಿಶೀಲನೆಯ ಸಮಿತಿ ರಚಿಸಲಾಗಿದ್ದು, ಇದುವರೆವಿಗೂ ವಾರ್ಷಿಕ ದಾಸ್ತಾನು ಪರಿಶೀಲನೆ ಕಾರ್ಯ ಪೂರ್ಣಗೊಂಡಿರುವುದಿಲ್ಲವೆಂದು ತಿಳಿಸಿದರು. |
| | ಮಾನ್ಯ ಕುಲಪತಿಯವರು ಮಾತನಾಡಿ, ಈಗಾಗಲೇ ದಾಸ್ತಾನು ಪರಿಶೀಲನೆಯ ಸಮಿತಿ ರಚಿಸಲಾಗಿದ್ದರೆ, ಆ ಸಮಿತಿಯು ದಿನಾಂಕ: 10-12-2021ರೊಳಗೆ ಉಪ ಕುಲಸಚಿವರು, ಎಸ್ಟೇಟ್ ಆಫೀಸರ್ ಹಾಗೂ ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಅವರ ಸಮ್ಮುಖದಲ್ಲಿ ದಾಸ್ತಾನು ಪರಿಶೀಲನೆಯ ಕಾರ್ಯವನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು. |

| | |
|---|---|
| 4 | ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಗುರುತಿನ ಚೀಟಿ ವಿತರಿಸುವುದು ಮತ್ತು ವಾಹನಗಳಿಗೆ sticker ಹಾಕುವ ಬಗ್ಗೆ. |
| | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಇವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ವಿದ್ಯಾರ್ಥಿನಿಲಯದಲ್ಲಿ ವಾಸ ಮಾಡುತ್ತಿರುವ ಅನಧಿಕೃತ ವ್ಯಕ್ತಿಗಳನ್ನು ಗುರುತಿಸುವ ಸಂಬಂಧ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಗುರುತಿನ ಚೀಟಿ ವಿತರಿಸುವುದು ಮತ್ತು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರು, ಅಧ್ಯಾಪಕೇತರರು, ಅತಿಥಿ ಉಪನ್ಯಾಸಕರು, ಸಂಶೋಧನಾ ವಿದ್ಯಾರ್ಥಿಗಳು ಮತ್ತು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ವಾಹನಗಳಿಗೆ sticker ಹಾಕುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿತ್ತು. ಆದರೆ, ಇದುವರೆವಿಗೂ ಕಾರ್ಯಗತಗೊಂಡಿರುವುದಿಲ್ಲವೆಂದು ಪ್ರಸ್ತಾಪಿಸಿದರು. |
| | ಶ್ರೀ.ಎಸ್.ಡಿ.ದೊಡ್ಡಚಾರಿಯವರು ಮಾತನಾಡಿ, ವಿದ್ಯಾರ್ಥಿನಿಲಯಗಳಲ್ಲಿ ಅನಧಿಕೃತವಾಗಿ ವಾಸಿಸುತ್ತಿರುವ ವ್ಯಕ್ತಿಗಳನ್ನು ಪತ್ತೆ ಹಚ್ಚುವುದು ಗಂಭೀರವಾದ ವಿಷಯವಾಗಿದ್ದು, ಈ ಸಂಬಂಧ ವಿಶ್ವವಿದ್ಯಾನಿಲಯವು ಜರೂರಾಗಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು. |
| | ಡಾ. ಈ.ಸಿ.ನಿಂಗರಾಜ್ ಗೌಡ ಅವರು ಮಾತನಾಡಿ, 13 ವಿದ್ಯಾರ್ಥಿನಿಲಯಗಳಲ್ಲಿ ಒಟ್ಟು 250 ಮಂದಿ ಅನಧಿಕೃತವಾಗಿ ವಾಸಿಸುತ್ತಿದ್ದಾರೆ. ಅದರಲ್ಲಿ 75 ಸಂಶೋಧನಾ ವಿದ್ಯಾರ್ಥಿಗಳಿಗೆ ಮನೆ ಬಾಡಿಗೆ ಭತ್ಯೆ ಮತ್ತು ಇಬಿಎಲ್ ಹುಂಡಿ ತೆಗೆದುಕೊಳ್ಳುತ್ತಾರೆ. ಆದರೆ, ವಿಶ್ವವಿದ್ಯಾನಿಲಯಕ್ಕೆ ಪಾವತಿಸುತ್ತಿಲ್ಲವೆಂದು ತಿಳಿಸಿದರು. ವಿಶ್ವವಿದ್ಯಾನಿಲಯದ 13 ವಿದ್ಯಾರ್ಥಿನಿಲಯಗಳಲ್ಲಿಯೂ ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಮೆಸ್ ಹುಂಡಿಯನ್ನು ಪಾವತಿಸಿರುತ್ತಾರೆ. ಇವರುಗಳು ಪಾವತಿಸಿರುವ 40-45 ಲಕ್ಷ ಮೊತ್ತವು ಸಂಬಂಧಪಟ್ಟ ಖಾತೆಗೆ ಸಂದಾಯ ಮಾಡದೇ, ವಾರ್ಡನ್ ಹಾಗೂ ಅಲ್ಲಿರುವ ಉದ್ಯೋಗಿಗಳು ದುರುಪಯೋಗಪಡಿಸಿಕೊಂಡಿರುತ್ತಾರೆಂದು ಮಾಹಿತಿ ಬಂದಿರುತ್ತದೆ ಹಾಗೂ ಎಲ್ಲಾ ವಿದ್ಯಾರ್ಥಿನಿಲಯಗಳು ಅನಧಿಕೃತ ವ್ಯಕ್ತಿಗಳು ಉಚಿತವಾಗಿ ತಿಂಡಿ/ಊಟ ಮಾಡುತ್ತಿರುವುದರಿಂದ, ಆಹಾರದ ಗುಣಮಟ್ಟವನ್ನು ಸಹ ಪರಿಶೀಲಿಸಬೇಕೆಂದು ತಿಳಿಸಿದರು. |
| | ಮಾನ್ಯ ಕುಲಪತಿಯವರು ಮಾತನಾಡಿ, ಸಂಶೋಧನಾ ವಿದ್ಯಾರ್ಥಿಗಳು ಪಿಹೆಚ್.ಡಿ ನೋಂದಣಿ ಅಥವಾ ಅಂತಿಮ ವರದಿ ಸಲ್ಲಿಸಿರುವವರು ಕಾರಣಾಂತರಗಳಿಂದ ವಿದ್ಯಾರ್ಥಿನಿಲಯದಲ್ಲಿ ಉಳಿದುಕೊಳ್ಳಬೇಕಾದಲ್ಲಿ 1-2 ಕೊಠಡಿಗಳನ್ನು ನೀಡಲಾಗುವುದು. ಆದರೆ, ಇವರುಗಳು ಕಡ್ಡಾಯವಾಗಿ ಬಾಡಿಗೆ ಮತ್ತು ಮೆಸ್ ಬಿಲ್ ಪಾವತಿಸಬೇಕು. ವಿದ್ಯಾರ್ಥಿನಿಲಯಗಳಲ್ಲಿ ವಾಸಿಸುತ್ತಿರುವ ಅನಧಿಕೃತವಾಗಿ ವಾಸಿಸುತ್ತಿರುವವರನ್ನು ಮತ್ತು ಬಾಡಿಗೆ ಮತ್ತು ಮೆಸ್ ಬಿಲ್ ಪಾವತಿ ಮಾಡದೇ ಇರುವವರನ್ನು ಪತ್ತೆ ಮಾಡಲು ಎಲ್ಲಾ ವಿದ್ಯಾರ್ಥಿನಿಲಯಗಳನ್ನು ಸಂಪೂರ್ಣವಾಗಿ ಪುನರವಲೋಕನ (review) ಮಾಡುವ ಸಂಬಂಧ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದ ನಿರ್ದೇಶಕರನ್ನು ಸಂಯೋಜಕರನ್ನಾಗಿ ಮಾಡಿ ಈ ಕೆಳಕಂಡಂತೆ ಸಿಂಡಿಕೇಟ್ ಉಪ ಸಮಿತಿಯನ್ನು ರಚಿಸಲಾಗುವುದೆಂದು ತಿಳಿಸಿದರು.<br>**ಸಿಂಡಿಕೇಟ್ ಉಪ ಸಮಿತಿ – ಹಣಕಾಸು ಅಧಿಕಾರಿಗಳು, ಪ್ರೊ.ರಮೇಶ್, ಶ್ರೀ ಎಸ್.ಡಿ.ದೊಡ್ಡಚಾರಿ ಮತ್ತು ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್** |
| 5 | ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳ ಬಗ್ಗೆ. |
| | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಇವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳ ಹಂಚಿಕೆಗೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ವಯ ಕ್ರಮ ಕೈಗೊಳ್ಳುವ ಬಗ್ಗೆ ಹಾಗೂ ಖಾಯಂ/ತಾತ್ಕಾಲಿಕ ಉದ್ಯೋಗಿಗಳಿಗೆ ವಸತಿಗೃಹದ ಮನೆ ಬಾಡಿಗೆ ನಿಗದಿಪಡಿಸಿ, ಕೆಲವು ಅಂಶಗಳನ್ನು ಅನುಷ್ಠಾನಗೊಳಿಸಲು ಶಿಫಾರಸ್ಸು ಮಾಡಿರುವ ಸಭೆಯನ್ನು ದಿನಾಂಕ: 18-08-2020ರಂದು ನಡೆಸಲಾಗಿತ್ತು. ಆದರೆ, ಸಮಿತಿಯು ಶಿಫಾರಸ್ಸು ಮಾಡಿರುವ ಅಂಶಗಳನ್ನು ಅಳವಡಿಸಿಕೊಂಡು ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳನ್ನು ಹಂಚಿಕೆ ಮಾಡದಿರುವುದು ಗಮನಕ್ಕೆ ಬಂದಿರುತ್ತದೆ ಎಂದು ತಿಳಿಸಿದರು. |
| | ಮಾನ್ಯ ಕುಲಪತಿಯವರು ಮಾತನಾಡಿ, ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 26 ವಸತಿಗೃಹಗಳು ಖಾಲಿ ಇದ್ದು, 26 ವಸತಿಗೃಹಗಳಿಗೆ 110 ಖಾಯಂ ಉದ್ಯೋಗಿಗಳು ಅರ್ಜಿ |

| | |
|---|---|
| | ಸಲ್ಲಿಸಿರುತ್ತಾರೆ ಹಾಗೂ ಒಂದೇ ವಸತಿಗೃಹಕ್ಕೆ 05 ತಾತ್ಕಾಲಿಕ ಉದ್ಯೋಗಿಗಳು ಅರ್ಜಿ ಸಲ್ಲಿಸಿರುತ್ತಾರೆ. ಅಷ್ಟೆ ಅಲ್ಲದೇ ಉದ್ಯೋಗಿಗಳು ತಮಗೆ ಇಚ್ಛೆಯುಳ್ಳ ವಸತಿಗೃಹಕ್ಕೆ ಮಂತ್ರಿಗಳು, ಎಂಎಲ್ಎ ಮತ್ತು ಎಂಎಲ್‌ಸಿ ಯವರುಗಳಿಂದ ಶಿಫಾರಸ್ಸು ಮಾಡುತ್ತಾರೆ. ಆದುದರಿಂದ, ವಸತಿಗೃಹಗಳನ್ನು ಹಂಚಿಕೆ ಮಾಡುವುದೇ ದೊಡ್ಡ ಸಮಸ್ಯೆಯಾಗಿದೆ. ವಾಹನ ಚಾಲಕರಿಗೆ ಅಥವಾ ಒಂದಿಬ್ಬರಿಗೆ ಮಾತ್ರ ಹಂಚಿಕೆ ಮಾಡಲು ಶಿಫಾರಸ್ಸು ಮಾಡಲಾಗುವುದು ಹೊರತು ಈ ಸಂಬಂಧ ಒಂದು ಸಿಂಡಿಕೇಟ್ ಉಪ ಸಮಿತಿಯನ್ನು ರಚಿಸಲಾಗುವುದು. ಈ ಉಪ ಸಮಿತಿಯು ಶಿಫಾರಸ್ಸು ಮಾಡಿದವರಿಗೆ ವಸತಿಗೃಹಗಳನ್ನು ಹಂಚಿಕೆ ಮಾಡಲಾಗುವುದು ಎಂದರು. |
| | ಪ್ರೊ. ರಮೇಶ್ ಅವರು ಮಾತನಾಡಿ, ಸ್ವಂತ ಮನೆ ಹೊಂದಿರುವವರಿಗೆ ವಸತಿಗೃಹವನ್ನು ಹಂಚಿಕೆ ಮಾಡಬಾರದು ಹಾಗೂ ಈಗಾಗಲೇ ಹಂಚಿಕೆ ಮಾಡಿದರೆ ಅಂತಹವರನ್ನು ಗುರುತಿಸಿ ವಸತಿಗೃಹದಿಂದ ತೆರುವುಗೊಳಸಲು ಕ್ರಮ ವಹಿಸಬೇಕೆಂದು ತಿಳಿಸಿದರು. |
| | ಡಾ. ಎಂ.ಎಸ್.ದಾಮೋದರ ಅವರು ಮಾತನಾಡಿ, 10-15 ವರ್ಷದಿಂದ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ವಸತಿಗೃಹ ಮಂಜೂರಾಗದೇ, 1-2 ವರ್ಷದಿಂದ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ಮಂಜೂರು ಮಾಡಿರುವುದು ಕಂಡು ಬಂದಿದೆ. ಪ್ರಸ್ತುತವಿರುವ ಸಮಿತಿಗೆ ಇಬ್ಬರು ಸಿಂಡಿಕೇಟ್ ಸದಸ್ಯರನ್ನು ಸೇರ್ಪಡೆಗೊಳಿಸಿ, ಹಂಚಿಕೆ ಸಮಿತಿ (Allotment Committee) ರಚಿಸುವುದು. ವಸತಿಗೃಹಗಳನ್ನು ಹಂಚಿಕೆ ಮಾಡುವಾಗ ಖಾಯಂ ಉದ್ಯೋಗಿಗಳಿಗೆ ಅದರಲ್ಲೂ ಮೊದಲು ಅರ್ಜಿ ಸಲ್ಲಿಸಿದ್ದವರಿಗೆ seniority ಆಧಾರದ ಮೇಲೆ ಹಂಚಿಕೆ ಮಾಡುವುದು ಸೂಕ್ತ. ಹಂಚಿಕೆ ಸಮಿತಿಯು ಶಿಫಾರಸ್ಸು ಮಾಡುವ ಉದ್ಯೋಗಿಗೆ ಮಾತ್ರ ವಸತಿಗೃಹವನ್ನು ಹಂಚಿಕೆ ಮಾಡಬೇಕೆಂದು ತಿಳಿಸಿದರು. |
| | ಶ್ರೀ ಎಂ.ಬಿ.ಗಪ್ಪಣ್ಣ ಅವರು ಮಾತನಾಡಿ, ವಸತಿಗೃಹವನ್ನು ಹಂಚಿಕೆ ಮಾಡುವಾಗ ಯಾವುದೇ ಕಾರಣಕ್ಕೂ ಯಾರ ಶಿಫಾರಸ್ಸುಗಳನ್ನು ಪರಿಗಣಿಸಬಾರದು ಹಾಗೂ ನಿಯಮಾನುಸಾರ ವಸತಿಗೃಹವನ್ನು ಹಂಚಿಕೆ ಮಾಡುವ ಮುಖಾಂತರ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲೇ ಪರಿಹರಿಸಿಕೊಳ್ಳಬೇಕೆಂದು ತಿಳಿಸಿದರು. |
| | ಡಾ. ಈ.ಸಿ.ನಿಂಗರಾಜ್ ಗೌಡ ಅವರು ಮಾತನಾಡಿ, ಪತಿ ಹಾಗೂ ಪತ್ನಿ ಇಬ್ಬರು ಸರ್ಕಾರಿ ನೌಕರರಾಗಿದ್ದಲ್ಲಿ, ಒಬ್ಬರ ಮನೆ ಬಾಡಿಗೆ ಭತ್ಯೆಯನ್ನು ರದ್ದುಗೊಳಸಬೇಕು ಮತ್ತು ವಾಸಯೋಗ್ಯವಲ್ಲದ ವಸತಿಗೃಹಗಳನ್ನು ಗುರುತಿಸಿ ಅವಘಡಗಳು ಸಂಭವಿಸುವ ಮೊದಲೇ ನೆಲಸಮ ಮಾಡುವುದು ಸೂಕ್ತವೆಂದು ಸಲಹೆ ನೀಡಿದರು. |
| | ಮೇಲ್ಕಂಡ ಸಲಹೆಗಳನ್ನು ಪರಾಮರ್ಶಿಸಿದ ಮಾನ್ಯ ಕುಲಪತಿಯವರು ಮಾತನಾಡಿ, ಪ್ರಸುತವಿರುವ ಸಮಿತಿಗೆ ಇಬ್ಬರು ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಹಂಚಿಕೆ ಸಮಿತಿ (Allotment Committee) ರಚಿಸಲಾಗುವುದು. ಹಾಗೆಯೇ, ವಾಸಯೋಗ್ಯ/ವಾಸಯೋಗ್ಯವಲ್ಲದ ವಸತಿಗೃಹಗಳನ್ನು ಗುರುತಿಸಲು ಸಹಾಯಕ ಇಂಜಿನಿಯರ್ ಹಾಗೂ ಇಬ್ಬರು ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಸಮಿತಿ ರಚಿಸಲಾಗುವುದೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| 6 | ಮರು ಮೌಲ್ಯಮಾಪನದ ಬಗ್ಗೆ |
| | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಇವರು ಮಾತನಾಡಿ, ಕೆಲವು ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದು, ಮರುಮೌಲ್ಯಮಾಪನದಲ್ಲಿ ತೇರ್ಗಡೆಯಾದ ಅಥವಾ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳಿಗೆ ಪಾವತಿಸಿರುವ ಅರ್ಜಿ ಶುಲ್ಕವನ್ನು ಮರು ಪಾವತಿಸಲಾಗುತ್ತಿದೆಯೇ ಸ್ಪಷ್ಟ ಮಾಹಿತಿ ನೀಡಬೇಕೆಂದು ಹಾಗೂ ಒಂದು ಕಾಲೇಜಿನ 10 ವಿದ್ಯಾರ್ಥಿಗಳು ಎಲ್ಲಾ ವಿಷಯಗಳಲ್ಲಿ Distinction ಅಂಕ ಪಡೆದಿದ್ದು, ಒಂದು ವಿಷಯದಲ್ಲಿ ಕಡಿಮೆ ಅಂಕ ಬಂದಿರುವ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ದೂರವಾಣಿ ಮುಖಾಂತರ ಪ್ರಾಂಶುಪಾಲರು ವಿಚಾರಿಸಿದಾಗ, ವಿವಿ ಸಿಬ್ಬಂದಿವರ್ಗದ ಒಬ್ಬರು ನೀವು ಏಕೆ ವಿದ್ಯಾರ್ಥಿಗಳ ಪರವಾಗಿ ದೂರವಾಣಿ ಮಾಡುತ್ತೀರಿ, ವಿದ್ಯಾರ್ಥಿಗಳಿಗೆ ಅವಶ್ಯಕತೆಯಿದ್ದಲ್ಲಿ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲ್ಲಿ ಎಂದು ಹಾರಿಕೆ ಉತ್ತರ ನೀಡಿರುತ್ತಾರೆ. ಯಾರೇ ಆಗಲಿ ಸಮಸ್ಯೆಗಳ ಬಗ್ಗೆ ದೂರವಾಣಿ ಅಥವಾ ನೇರವಾಗಿ ಪ್ರಸ್ತಾಪಿಸಿದ್ದರೆ, ವಿವಿ ಉದ್ಯೋಗಿಯು ಸ್ಪಂದಿಸಬೇಕೆಂದು ಸಭೆಯಲ್ಲಿ ತಿಳಿಸಿದರು. |

| | |
|---|---|
| | ಡಾ. ಈ.ಸಿ.ನಿಂಗರಾಜ್ ಗೌಡ ಅವರು ಮಾತನಾಡಿ, 1-2 ಅಂಕದಲ್ಲಿಯೂ ತೇರ್ಗಡೆಯಾದ ವಿದ್ಯಾರ್ಥಿಗಳಿಗೂ ಅರ್ಜಿ ಶುಲ್ಕ 100% ರಷ್ಟು ಪಾವತಿಸಬೇಕೆಂದು ತಿಳಿಸಿದರು. |
| | ಶ್ರೀ ಎಸ್.ಡಿ.ದೊಡ್ಡಚಾರಿ ಅವರು ಮಾತನಾಡಿ, ಈ ರೀತಿಯ ತೊಂದರೆಗಳು ಪದವಿ ಕೋರ್ಸಿನಲ್ಲದೇ ಪಿಯುಸಿ ನಲ್ಲಿಯೂ ಕಂಡು ಬರುತ್ತಿದೆ. ಒಂದು ಅರ್ಜಿ ಶುಲ್ಕವನ್ನು ಮರುಪಾವತಿಸುವುದು. ಇನ್ನೊಂದು ಅವಾರ್ಡ್ ಮಾಡುವುದು. ಈ ಸಂಬಂಧ ಶೇ.90-99 ಅಂಕ ಪಡೆದ ವಿದ್ಯಾರ್ಥಿಗಳು ಒಂದು ವಿಷಯದಲ್ಲಿ ತೇರ್ಗಡೆಗೆ 1-2 ಅಂಕ ನೀಡಿ ಅವಾರ್ಡ್‌ನೊಂದಿಗೆ ಮರುಮೌಲ್ಯಮಾಪನದ ಅರ್ಜಿ ಶುಲ್ಕವನ್ನು ಮರುಪಾವತಿಸಬೇಕೆಂದು ಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಇದಕ್ಕೆ ಕೋರ್ಟ್ ಸಹ ಸಮ್ಮತಿ ಸೂಚಿಸಿ ತೀರ್ಮಾನ ನೀಡಲಾಗಿತ್ತು. ಹಾಗೆಯೇ, ಕೋಮಲ ಎಂಬ ವಿದ್ಯಾರ್ಥಿಯು ಪರೀಕ್ಷೆ ತೆಗೆದುಕೊಳ್ಳದಿದ್ದರೂ ತೇರ್ಗಡೆ ಫಲಿತಾಂಶ ಬಂದಿರುತ್ತದೆ. ಮುಂದಿನ ದಿನಗಳಲ್ಲಿ ಇಂತಹ Case ಮರುಕಳಿಸದಂತೆ ವಿಶ್ವವಿದ್ಯಾನಿಲಯವು ಎಚ್ಚರಿಕೆ ವಹಿಸಬೇಕೆಂದು ತಿಳಿಸಿದರು. |
| | ಮಾನ್ಯ ಕುಲಸಚಿವರು (ಪರೀಕ್ಷಾಂಗ) ಅವರು ಮಾತನಾಡಿ, 1-2 ಅಂಕದಲ್ಲಿ ತೇರ್ಗಡೆಗೆ ವ್ಯತ್ಯಾಸವಾದಾಗ ಅವಾರ್ಡ್ ಮಾಡಲಾಗುತ್ತದೆ. ಆದರೆ, ಸಿಂಡಿಕೇಟ್ ತೀರ್ಮಾನದಂತೆ ಶೇ.10 ರಷ್ಟು ಅಂಕಗಳ ವ್ಯತ್ಯಾಸ ಕಂಡು ಬಂದಾಗ ಮಾತ್ರ ಅರ್ಜಿ ಶುಲ್ಕವನ್ನು 100% ಪಾವತಿಸಲಾಗುತ್ತಿದೆ ಹಾಗೂ ಯಾರು erratic ಮೌಲ್ಯಮಾಪನ ಮಾಡುತ್ತಾರೋ ಅವರಿಗೆ ಪ್ರತಿ ತಪ್ಪಿಗೆ ಒಂದು ಸಾವಿರ ರೂಪಾಯಿಗಳನ್ನು ದಂಡ ವಿಧಿಸಲಾಗುತ್ತಿದೆ. ಪ್ರತಿ ವಿದ್ಯಾರ್ಥಿಯ ಉತ್ತರ ಪತ್ರಿಕೆಯನ್ನು coding/decoding ಮಾಡುವುದರಿಂದ ಯಾವ ವಿದ್ಯಾರ್ಥಿ/ಕಾಲೇಜು ಎಂದು ಗುರುತಿಸಲು ಸಾಧ್ಯವಾಗುವುದಿಲ್ಲ. erratic ಮೌಲ್ಯಮಾಪನದ ಬಗ್ಗೆ 400 ಸ್ನಾತಕ ವಿದ್ಯಾರ್ಥಿಗಳು ದೂರನ್ನು ನೀಡಿದ್ದರು. ಈ ಸಂಬಂಧ unofficial ಆಗಿ ಮರು ಮೌಲ್ಯಮಾಪನವನ್ನು ಮಾಡಿಸಲಾಯಿತು. ಅಷ್ಟು ಉತ್ತರ ಪತ್ರಿಕೆಗಳಲ್ಲೂ ಹೆಚ್ಚು ಅಂಕಗಳು ವ್ಯತ್ಯಾಸವಾಗಿರುವುದು ಕಂಡು ಬರಲಿಲ್ಲ. Scheme of Valuationಗೆ ಕೊಡುವುದರಿಂದ ಸ್ನಾತಕ ಪದವಿಗಳಲ್ಲಿ ಹೆಚ್ಚಿನ ಅಂಕಗಳ ವ್ಯತ್ಯಾಸ ಕಂಡು ಬರುವುದಿಲ್ಲ. |
| | ಈ ಸಂಬಂಧ ಮಾತನಾಡಿದ ಮಾನ್ಯ ಕುಲಪತಿಗಳು, ಇನ್ನು ಮುಂದೆ ಮೌಲ್ಯಮಾಪಕರು ಹೆಚ್ಚಿನ ಮಟ್ಟದಲ್ಲಿ erratic ಮೌಲ್ಯಮಾಪನ ಮಾಡಿರುವುದು ಕಂಡು ಬಂದಲ್ಲಿ, ಅಂತಹವರನ್ನು ಕಪ್ಪು ಪಟ್ಟಿಯಲ್ಲಿಡಲು ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿದರು. |
| 7 | ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ಬಗ್ಗೆ. |
| | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಇವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ನಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ಯುಜಿಸಿ ನಿಯಮಗಳನ್ವಯ ವೇತನ ಪಾವತಿಸುವುದು. ಇಲ್ಲವಾದಲ್ಲಿ ವಿಶ್ವವಿದ್ಯಾನಿಲಯದ ಅನುದಾನದಿಂದ ವೇತನ ಪಾವತಿ ಮಾಡಬೇಕು ಮತ್ತು ಸದರಿ ಉದ್ಯೋಗಿಗಳ ಸೇವಾ ಪುಸ್ತಕಗಳನ್ನು ಸಿದ್ಧಪಡಿಸಬೇಕೆಂದು, ಈ ಸಂಬಂಧ ಒಬ್ಬರು ವಿಷಯತಜ್ಞರನ್ನು ನೇಮಕ ಮಾಡಿ ತರಬೇತಿ ನೀಡಲಾಗುವುದೆಂದು ತೀರ್ಮಾನಿಸಲಾಯಿತು. ಆದರೆ, ಇಲ್ಲಿಯವರೆಗೂ ಅನುಷ್ಠಾನಗೊಂಡಿಲ್ಲವೆಂದು ಹಾಗೂ ಈ ಸಂಬಂಧ ಸಮಿತಿಯನ್ನು ರಚಿಸಲಾಗಿದ್ದು, ಒಂದು ವರ್ಷವಾದರೂ ಸಭೆ ನಡೆಸಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಈ ಪ್ರಸ್ತಾವನೆಗೆ ಡಾ.ಎಂ.ಎಸ್.ದಾಮೋಧರ ಅವರು ದನಿಗೂಡಿಸಿದರು. |
| | ಈ ಸಂಬಂಧ ಪ್ರಸ್ತುತ ನಿರ್ದೇಶಕರಾಗಿರುವ ಪ್ರೊ. ಶಂಕರ್ ಹಾಗೂ ಅಲ್ಲಿರುವ ಅಧ್ಯಾಪಕರುಗಳೊಂದಿಗೆ ದಿನಾಂಕ: 03-12-2021ರೊಳಗೆ ಚರ್ಚಿಸಿ, ಸದರಿ ಉದ್ಯೋಗಿಗಳ ವೇತನ ಹಾಗೂ ಸೇವಾ ಪುಸ್ತಕಕ್ಕೆ ಸಂಬಂಧಿಸಿದಂತೆ ದಿನಾಂಕ: 15-12-2021ರೊಳಗೆ ಸಮಸ್ಯೆಗಳನ್ನು ಬಗೆಹರಿಸಲಾಗುವುದೆಂದು ಮಾನ್ಯ ಕುಲಪತಿಯವರು ತಿಳಿಸಿದರು. |

| | |
|---|---|
| ೮ | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಇವರು ಮಾತನಾಡಿ, ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳ ಸೇವಾವಧಿಯು ಮೂರು ವರ್ಷ ಪೂರ್ಣಗೊಂಡಿದ್ದರೆ ಹಾಗೂ ಒಬ್ಬರೇ ಅಧ್ಯಾಪಕರು ೦೨ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ, ಒಂದು ಹುದ್ದೆಯಿಂದ ಬಿಡುಗೊಳಿಸಿ, ಸಾಮಾಜಿಕ ನ್ಯಾಯದ ಆಧಾರದ ಮೇಲೆ ನೇಮಕ ಮಾಡಲಾಗುವುದೆಂದು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಯಿತು. ಆದರೂ ಇನ್ನು ಕೆಲವು ಅಧ್ಯಾಪಕರುಗಳು ಆಡಳಿತಾತ್ಮಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಮತ್ತು ಒಬ್ಬರೇ ಅಧ್ಯಾಪಕರು ೦೨ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಿದೆ. ಈ ಸಂಬಂಧ ಸಿಂಡಿಕೇಟ್ ತೀರ್ಮಾನದಂತೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು. |
| | ಶ್ರೀ ಎಸ್.ಡಿ.ದೊಡ್ಡಬಾರಿ ಹಾಗೂ ಡಾ. ಎಂ.ಎಸ್ ದಾಮೋದರ ಅವರುಗಳು ಮಾತನಾಡಿ, ಕುಲಸಚಿವರ ಆಪ್ತ ಸಹಾಯಕರಾದ ಶ್ರೀ ಚನ್ನಕೇಶವ ಅವರಿಗೆ ಪದೋನ್ನತಿ ಹೊಂದಿದ್ದರೂ ಸದರಿ ಆಪ್ತ ಸಹಾಯಕರ ಹುದ್ದೆಯಲ್ಲಿಯೇ ಮುಂದುವರೆದಿದ್ದಾರೆ. ಹಾಗೆಯೇ ಒಂದೇ ಹುದ್ದೆಯಲ್ಲಿ ಸುಮಾರು ವರ್ಷದಿಂದ ಕಾರ್ಯನಿರ್ವಹಿಸುತ್ತಿರುವ ಅಧೀಕ್ಷಕರಾದ ಶ್ರೀ ದಿನೇಶ್ ಹಾಗೂ ಶ್ರೀ ಚೆನ್ನಕೇಶವ ಅವರುಗಳನ್ನು ವರ್ಗಾವಣೆ ಮಾಡಬೇಕೆಂದು 2-3 ಸಿಂಡಿಕೇಟ್ ಸಭೆಗಳಲ್ಲಿ ಚರ್ಚೆಯಾಗಿ ತೀರ್ಮಾನವಾದರೂ ಸಹ ಇನ್ನು ವರ್ಗಾವಣೆ ಮಾಡಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.<br><br>ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಸಚಿವರು, ಶ್ರೀ ಚನ್ನಕೇಶವ ಅವರು ಸೇವಾರ್ಹತೆ ಹೊಂದಿದ್ದು, ಸಿಎಎಸ್ ಪದೋನ್ನತಿ ಕಾರ್ಯವು ಪೂರ್ಣಗೊಂಡ ನಂತರ ವರ್ಗಾವಣೆ ಮಾಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.<br><br>ಈ ವಿಷಯಕ್ಕೆ ಪ್ರತ್ಯುತ್ತರವಾಗಿ ಮಾತನಾಡಿದ ಶ್ರೀ ಎಸ್.ಡಿ.ದೊಡ್ಡಬಾರಿ & ಡಾ. ಎಂ.ಎಸ್ ದಾಮೋದರ ಅವರುಗಳು ಇದೇ ರೀತಿ ಸೇವಾರ್ಹತೆ ಹೊಂದಿರುವ ಉದ್ಯೋಗಿಗಳು ಮೈಸೂರು ವಿಶ್ವವಿದ್ಯಾನಿಲಯದಲ್ಲಿದ್ದು, ಇವರಿಬ್ಬರನ್ನು ಕೂಡಲೇ ವರ್ಗಾವಣೆ ಮಾಡಿ, ಇತರೆ ಉದ್ಯೋಗಿಗಳಿಗೆ ಅವಕಾಶ ಮಾಡಿಕೊಡಬೇಕೆಂದು ಆಗ್ರಹಿಸಿದರು.<br><br>ಈ ಪ್ರಸ್ತಾವನೆಗೆ ಮಾನ್ಯ ಕುಲಪತಿಯವರು ಸಮ್ಮತಿಸಿದರು. |
| ೯ | ಅನಾಮಧೇಯ ಪತ್ರ ಹಾಗೂ ವಾಟ್ಸಪ್ ಗ್ರೂಪ್‌ಗಳಲ್ಲಿ circulate ಆಗುತ್ತಿರುವ ವಿಷಯಗಳ ಬಗ್ಗೆ |
| | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಇವರು ಮಾತನಾಡಿ, ಸುಮಾರು ತಿಂಗಳುಗಳಿಂದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯವರು ಹಾಗೂ ಕೆಲವು ಸಿಂಡಿಕೇಟ್ ಸದಸ್ಯರುಗಳ ಮೇಲೆ ಇಲ್ಲಸಲ್ಲದ ಆರೋಪ ಮಾಡಿ ಅನಾಮಧೇಯ ಪತ್ರ ಬರುತ್ತಿದೆ. ಹಾಗೆಯೇ, ವಾಟ್ಸಪ್ ಗ್ರೂಪ್‌ಗಳಲ್ಲಿ ಸುಳ್ಳು ವದಂತಿಗಳ circulate ಆಗುತ್ತಿರುವುದರಿಂದ, ಈ ಸಂಬಂಧ ಸೈಬರ್ ಕ್ರೈಂಗೆ ದೂರು ನೀಡಿ, ಸತ್ಯಾಸತ್ಯತೆಯ ಬಗ್ಗೆ ತನಿಖೆ ಮಾಡಬೇಕೆಂದು ಸಭೆಯಲ್ಲಿ ಒತ್ತಾಯಪಡಿಸಿದರು.<br><br>ಈ ವಿಷಯದ ಬಗ್ಗೆ ಕುಲಸಚಿವರು (ಪರೀಕ್ಷಾಂಗ), ಡಾ. ಸೈಯದ್ ಕಾರು ಮೊಹಿದ್ದೀನ್, ಶ್ರೀ ಎಂ.ಬಿ.ಗಪ್ಪಣ್ಣ, ಶ್ರೀ ಎಂ.ಡಿ.ದೊಡ್ಡಬಾರಿ ಹಾಗೂ ಡಾ. ಎಂ.ಎಸ್.ದಾಮೋದರ ಅವರುಗಳು ತಮ್ಮತಮ್ಮ ಅಭಿಪ್ರಾಯಗಳನ್ನು ಸಭೆಯಲ್ಲಿ ವ್ಯಕ್ತಪಡಿಸಿದರು. |
| | ಮಾನ್ಯ ಕುಲಪತಿಯವರು ಮಾತನಾಡಿ, ಅನಾಮಧೇಯ ಪತ್ರ ಹಾಗೂ ವಾಟ್ಸಪ್ ಗ್ರೂಪ್‌ಗಳಲ್ಲಿ circulate ಆಗುತ್ತಿರುವ ವಿಷಯಗಳ ಬಗ್ಗೆ ತನಿಖೆ ಮಾಡಲು ವಿಶ್ವವಿದ್ಯಾನಿಲಯದ ವತಿಯಿಂದ ಸೈಬರ್ ಕ್ರೈಂಗೆ ದೂರು ನೀಡಲಾಗುವುದು ಹಾಗೂ ಅನಾಮಧೇಯ ಪತ್ರ ಹಾಗೂ ವಾಟ್ಸಪ್ ಗ್ರೂಪ್‌ಗಳಲ್ಲಿ circulate ಮಾಡುತ್ತಿರುವ ಮೂಲ ವ್ಯಕ್ತಿಗಳನ್ನು ಪತ್ತೆ ಹಚ್ಚಲು ಸಿಂಡಿಕೇಟ್ ಉಪ ಸಮಿತಿ ರಚಿಸಲಾಗುವುದೆಂದು ತಿಳಿಸಿದರು. |

| | |
|---|---|
| 10 | ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗದ ವಿಳಾಸ ಹಾಗೂ ವಿವಿ ಲಾಂಛನವುಳ್ಳ ನಕಲಿ ರಶೀದಿಯಲ್ಲಿ ಕ್ರೀಡಾ ಶುಲ್ಕ ವಸೂಲಿ ಮಾಡಿರುವ ಬಗ್ಗೆ. |
| | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಇವರು ಮಾತನಾಡಿ, ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗದ ವಿಳಾಸ ಹಾಗೂ ವಿವಿ ಲಾಂಛನವುಳ್ಳ ನಕಲಿ ರಶೀದಿಯಲ್ಲಿ ಕ್ರೀಡಾ ಶುಲ್ಕ ವಸೂಲಿ ಮಾಡಿರುವ ಸಂಬಂಧ ನಡೆಸಲಾದ ಕ್ರಮದ ಬಗ್ಗೆ ವಿವರ ನೀಡಬೇಕೆಂದು ಕೋರಿದರು. |
| | ಪ್ರೊ. ರಮೇಶ್ ಮತ್ತು ಶ್ರೀ ಎಂ.ಬಿ.ಗಪ್ಪಣ್ಣ ಮಾತನಾಡಿ, ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗದ ವಿಳಾಸ ಹಾಗೂ ವಿವಿ ಲಾಂಛನವುಳ್ಳ ನಕಲಿ ರಶೀದಿಯಲ್ಲಿ ಕ್ರೀಡಾ ಶುಲ್ಕ ವಸೂಲಿ ಮಾಡಿರುವ ಸಂಬಂಧ ವಿಚಾರಣಾ ಸಮಿತಿ ಪೂರ್ಣಗೊಂಡಿದ್ದು, 3-4 ದಿನದೊಳಗೆ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾಗುವುದೆಂದು ತಿಳಿಸಿದರು. ಕುಲಪತಿಗಳು ಸಮ್ಮತಿಸಿದರು. |
| 11 | ಚಾಮರಾಜನಗರ ಕೇಂದ್ರಕ್ಕೆ ಒದಗಿಸಲಾಗಿರುವ ಮೂಲಭೂತ ಸೌಕರ್ಯದ ಬಗ್ಗೆ. |
| | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಇವರು ಮಾತನಾಡಿ, ಚಾಮರಾಜನಗರ ಕೇಂದ್ರಕ್ಕೆ ಅವಶ್ಯಕವಾಗಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಕೋರಿದರು. |
| | ಮಾನ್ಯ ಕುಲಪತಿಯವರು ಮಾತನಾಡಿ, ದಿನಾಂಕ: 04-12-2021ರ ನಂತರ ಚಾಮರಾಜನಗರ ಕೇಂದ್ರಕ್ಕೆ ಕುಲಸಚಿವರು ಖುದ್ದಾಗಿ ಭೇಟಿ ನೀಡಿ, ಪ್ರಸ್ತುತವಿರುವ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ ವರದಿ ಸಲ್ಲಿಸಿದ ನಂತರ, ಅವಶ್ಯಕವಾಗಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದೆಂದು ತಿಳಿಸಿದರು. |
| 12 | ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಸುವರ್ಣಗಂಗೋತ್ರಿ, ಚಾಮರಾಜನಗರದಲ್ಲಿ ಸ್ಥಾಪಿಸಲಾಗಿರುವ ಡಾ.ಬಿ.ಆರ್.ಅಂಬೇಡ್ಕರ್‌ರವರ ಪುತ್ಥಳಿಯ ಬಗ್ಗೆ. |
| | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್, ಶ್ರೀ ಎಸ್.ಡಿ.ದೊಡ್ಡಚಾರಿ, ಡಾ.ಎಂ.ಎಸ್.ದಾಮೋದರ ಹಾಗೂ ಡಾ. ಈ.ಸಿ.ನಿಂಗರಾಜ್ ಗೌಡ ಅವರುಗಳು ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಸುವರ್ಣಗಂಗೋತ್ರಿ, ಚಾಮರಾಜನಗರದಲ್ಲಿ ಸ್ಥಾಪಿಸಲಾಗಿರುವ ಡಾ.ಬಿ.ಆರ್.ಅಂಬೇಡ್ಕರ್‌ರವರ ಪುತ್ಥಳಿಯನ್ನು ಸ್ಥಾಪಿಸಿರುವುದು ಸರಿಯಷ್ಟೆ. ಆದರೆ, ವಿಶ್ವವಿದ್ಯಾನಿಲಯದಿಂದ ಪೂರ್ವಾನುಮತಿಯನ್ನು ಪಡೆಯದೇ ಡಾ.ಬಿ.ಆರ್.ಅಂಬೇಡ್ಕರ್‌ರವರ ಪುತ್ಥಳಿಯಲ್ಲಿ 'ಕೊಡುಗೆ' ಎಂದು ನಮೂದಿಸುವುದರೊಂದಿಗೆ ಪ್ರಸ್ತುತವಿರುವ ನಿರ್ದೇಶಕರಾದ ಪ್ರೊ. ಶಿವಬಸವಯ್ಯ ಅವರು ತಮ್ಮ ಹೆಸರನ್ನು ನಮೂದಿಸಿರುಕೊಂಡಿರುವುದು ಸೂಕ್ತವಲ್ಲವೆಂದು ತಿಳಿಸುತ್ತಾ, ಈ ಸಂಬಂಧ ಪ್ರೊ. ಶಿವಬಸವಯ್ಯ ಅವರಿಗೆ ನೋಟೀಸ್ ಜಾರಿಗೊಳಿಸುವ ಮೂಲಕ ಡಾ.ಬಿ.ಆರ್.ಅಂಬೇಡ್ಕರ್‌ರವರ ಪ್ರತಿಮೆಗೆ ಭಂಗವಾಗದಂತೆ ಪುತ್ಥಳಿಯಲ್ಲಿ 'ಕೊಡುಗೆ' ಎನ್ನುವುದರಿಂದ ನಮೂದಿಸಲಾಗಿರುವ ಪ್ರಸ್ತುತ ನಿರ್ದೇಶಕರ ಹೆಸರನ್ನು ತೆಗೆದು ಹಾಕಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| | ಮಾನ್ಯ ಕುಲಪತಿಯವರು ಮಾತನಾಡಿ, ಈ ಸಂಬಂಧ ಪ್ರೊ. ಶಿವಬಸವಯ್ಯ ಅವರಿಗೆ ನೋಟೀಸ್ ಜಾರಿಗೊಳಿಸಲಾಗುವುದು ಹಾಗೂ ಡಾ.ಬಿ.ಆರ್.ಅಂಬೇಡ್ಕರ್‌ರವರ ಪ್ರತಿಮೆಗೆ ಭಂಗವಾಗದಂತೆ ಪುತ್ಥಳಿಯಲ್ಲಿ 'ಕೊಡುಗೆ' ಎನ್ನುವುದರಲ್ಲಿ ನಮೂದಿಸಲಾಗಿರುವ ನಿರ್ದೇಶಕರ ಹೆಸರನ್ನು ತೆಗೆಸಲಾಗುವುದೆಂದು ಒಪ್ಪಿಗೆ ಸೂಚಿಸಿದರು. |
| 13 | ಅಧ್ಯಾಪಕೇತರರ ಜೇಷ್ಠತಾ ಪಟ್ಟಿಯ ಬಗ್ಗೆ. |
| | ಶ್ರೀ ಎಸ್.ಡಿ.ದೊಡ್ಡಚಾರಿ ಹಾಗೂ ಡಾ. ಎಂ.ಎಸ್.ದಾಮೋದರ ಅವರುಗಳು ಮಾತನಾಡಿ, ಅಧ್ಯಾಪಕೇತರರ ಉದ್ಯೋಗಿಗಳಿಗೆ ಪದೋನ್ನತಿ ನೀಡುವ ಮೊದಲು ಪಟ್ಟಿಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯಬೇಕೆಂದು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡಿದ್ದರೂ ಸಹ ಈ ಕ್ರಮವನ್ನು ಇನ್ನು ಜಾರಿಗೊಳಿಸಲಾಗಿರುವುದಿಲ್ಲ. ಏಕೆಂದರೆ, ರೋಸ್ಟರ್ ಪ್ರಕಾರ ಪದೋನ್ನತಿ ನೀಡಲಾಗುತ್ತಿದೆಯೇ ಎಂದು ಪರಿಶೀಲಿಸಲು ಉಪಯುಕ್ತವಾಗುತ್ತದೆ ಹಾಗೂ ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಿರುವ ವಿದ್ಯಾರ್ಥಿನಿಲಯದ 07 ಉದ್ಯೋಗಿಗಳಿಗೆ ಸಾಮಾನ್ಯ ಜೇಷ್ಠತಾ ಪಟ್ಟಿಯಲ್ಲಿ ಹೆಸರನ್ನು ಸೇರ್ಪಡೆಗೊಳಿಸದೆ, ಪ್ರತ್ಯೇಕ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿರುವುದು ಸರಿಯಾದ ಕ್ರಮವಲ್ಲವೆಂದು ಪ್ರಸ್ತಾಪಿಸುತ್ತಾ, ಸಾಮಾನ್ಯ ಜೇಷ್ಠತಾ ಪಟ್ಟಿಯೊಂದಿಗೆ ವಿದ್ಯಾರ್ಥಿನಿಲಯದ ಜೇಷ್ಠತಾ ಪಟ್ಟಿಯನ್ನು ವಿಲೀನಗೊಳಿಸುವುದರೊಂದಿಗೆ ಇಲಾಖಾ ಪರೀಕ್ಷೆಗಳನ್ನು |

| | |
|---|---|
| | ವಿದ್ಯಾರ್ಥಿನಿಲಯದ ಉದ್ಯೋಗಿಗಳು ತೆಗೆದುಕೊಳ್ಳಲು ಅವಕಾಶ ಮಾಡಿಕೊಡಬೇಕು. ಆದುದರಿಂದ, ಈ ಸಂಬಂಧ ಸಿಂಡಿಕೇಟ್ ಉಪ ಸಮಿತಿಯನ್ನು ರಚಿಸಿ, ಅಧ್ಯಾಪಕೇತರರ ಜೇಷ್ಠತಾ ಪಟ್ಟಿಯನ್ನು ರೋಸ್ಟರ್ ನಿಯಮ ಹಾಗೂ ಉದ್ಯೋಗಿಗಳ ಸೇವಾ ಹಿರಿತನದ ಆಧಾರದ ಮೇಲೆ ಪರಿಷ್ಕರಿಸಲು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು ಹಾಗೂ ಎಲ್ಲಾ ಉಪಕುಲಸಚಿವ ಹುದ್ದೆಗಳನ್ನು ಅಧ್ಯಾಪಕೇತರರ ಉದ್ಯೋಗಿಗಳಿಗೆ ಮೀಸಲಿಡುವ ಸಂಬಂಧ ಸಿದ್ಧಪಡಿಸಲಾಗಿರುವ ಕರಡು ಅಧಿನಿಯಮವನ್ನು ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಸಿಂಡಿಕೇಟ್ ಸಭೆಯ ಅನುಮೋದನೆಯೊಂದಿಗೆ ಕಳುಹಿಸಿರುವುದು ಸರಿಯಷ್ಟೆ. ಈ ಕರಡು ಅಧಿನಿಯಮವನ್ನು ಸರ್ಕಾರವು ನಿರ್ದೇಶನದವನ್ವಯ ಕೆಲವು ತಿದ್ದುಪಡಿ ಮಾಡಬೇಕೆಂದು ವಿಶ್ವವಿದ್ಯಾನಿಲಯಕ್ಕೆ ಪತ್ರದೊಂದಿಗೆ ಅಧಿನಿಯಮವನ್ನು ವಾಪಸ್ಸು ಕಳುಹಿಸಿರುತ್ತಾರೆ. ಈ ವಿಷಯವನ್ನು ಸಿಬ್ಬಂದಿ ವಿಭಾಗದವರು ಸಿಂಡಿಕೇಟ್ ಸಭೆಯ ಗಮನಕ್ಕೆ ತರದೇ ತಾವೇ ತಿದ್ದುಪಡಿ ಮಾಡಿ ಸರ್ಕಾರಕ್ಕೆ ಕಳುಹಿಸಿರುವುದು ಸೂಕ್ತವಲ್ಲವೆಂದು ಸಹ ಪ್ರಸ್ತಾಪಿಸಿದರು. |
| | ಮಾನ್ಯ ಕುಲಪತಿಯವರು ಮಾತನಾಡಿ, ಅಧ್ಯಾಪಕೇತರರ ಜೇಷ್ಠತಾ ಪಟ್ಟಿಯಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಿ, ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲು ಹಣಕಾಸು ಅಧಿಕಾರಿ, ಡಾ. ಸೈಯದ್ ಕಾಝು ಮೊಹಿದ್ದೀನ್, ಕಾಲೇಜು ಜಂಟಿ ಶಿಕ್ಷಣದ ಆಯುಕ್ತರು, ಪ್ರೊ.ರಮೇಶ್ ಹಾಗೂ ಡಾ.ಎಂ.ಎಸ್.ದಾಮೋದರ ಅವರುಗಳನ್ನೊಳಗೊಂಡಂತೆ ಸಮಿತಿಯನ್ನು ಸಭೆಯಲ್ಲಿ ರಚಿಸಲಾಗಿದೆಯೆಂದು ತಿಳಿಸಿದರು. |
| 14 | ಡಾ. ಚೈತ್ರ ನಾರಾಯಣ ಹಾಗೂ ಶ್ರೀ ಎಂ.ಬಿ.ಗಪ್ಪಣ್ಣ ಅವರುಗಳು ಮಾತನಾಡಿ, ಭೂವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರಾದ ಪ್ರೊ.ಪಿ.ಮಾದೇಶ್ ಇವರು ಅತಿಥಿ ಉಪನ್ಯಾಸಕರಾಗಿ ನೇಮಕವಾಗಿರುವ ಶ್ರೀ ಅಭಿಜಿತ್ ಅವರಿಗೆ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲವೆಂದು ಸಭೆಯ ಗಮನಕ್ಕೆ ತರುತ್ತಾ, ಈ ಸಂಬಂಧ ಸಿಂಡಿಕೇಟ್ ಉಪ ಸಮಿತಿಯನ್ನು ರಚಿಸಬೇಕೆಂದು ಆಗ್ರಹಿಸಿದರು.<br><br>ಈ ಸಂಬಂಧ ಮಾನ್ಯ ಕುಲಪತಿಯವರು, ಕಾನೂನು ನಿಕಾಯದ ಡೀನರಾದ ಪ್ರೊ.ರಮೇಶ್ ಅವರನ್ನು ಅಧ್ಯಕ್ಷರನ್ನಾಗಿ, ಡಾ.ಚೈತ್ರ ನಾರಾಯಣ ಮತ್ತು ಶ್ರೀ ಆರ್.ಪ್ರದೀಪ್‌ಕುಮಾರ್ ದೀಕ್ಷಿತ್ ಇವರನ್ನು ಒಳಗೊಂಡಂತೆ ಸಮಿತಿಯನ್ನು ಸಭೆಯಲ್ಲಿ ರಚಿಸಲಾಯಿತು ಹಾಗೂ ವಿಚಾರಣೆಗೆ ಸಂಬಂಧಿಸಿದ ವರದಿಯನ್ನು ಆರು ವಾರದೊಳಗೆ ಸಲ್ಲಿಸಬೇಕೆಂದು ತಿಳಿಸಿದರು. |
| 15 | ಡಾ.ಎಂ.ಎಸ್.ದಾಮೋದರ್ ಮತ್ತು ಡಾ.ಚೈತ್ರ ನಾರಾಯಣ ಇವರುಗಳು ಮಾತನಾಡಿ, ಇನ್ನು ಮುಂದೆ ಒಂದಕ್ಕಿಂತ ಹೆಚ್ಚು ಹುದ್ದೆಯ ಅಧಿಕಾರವನ್ನು ಒಬ್ಬರಿಗೆ ನೀಡಬಾರದೆಂದು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನವಾಗಿರುವುದರಿಂದ, ಈಗಾಗಲೇ ಪ್ರೊ.ಪಿ.ಮಾದೇಶ್ ಅವರಿಗೆ ನೀಡಿರುವ ಆಡಳಿತಾಧಿಕಾರಿಯ ಹುದ್ದೆಯಿಂದ ಈ ತಕ್ಷಣದಿಂದಲೇ ಜಾರಿಗೆ ಬಂದಂತೆ ಬಿಡುಗಡೆಗೊಳಿಸಬೇಕೆಂದು ಆಗ್ರಹಿಸಿದರು. |
| | ಈ ಪ್ರಸ್ತಾವನೆಗೆ ಇತರೆ ಸಿಂಡಿಕೇಟ್ ಸದಸ್ಯರುಗಳು ದನಿಗೂಡಿಸಿದ ಹಿನ್ನೆಲೆಯಲ್ಲಿ ಪ್ರೊ.ಪಿ.ಮಾದೇಶ್ ಅವರಿಗೆ ನೀಡಿರುವ ಆಡಳಿತಾಧಿಕಾರಿಯ ಹುದ್ದೆಯಿಂದ ಬಿಡುಗಡೆಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| 16 | ಡಾ.ಎಂ.ಎಸ್.ದಾಮೋದರ್ ಮತ್ತು ಡಾ.ಚೈತ್ರ ನಾರಾಯಣ ಇವರುಗಳು ಮಾತನಾಡಿ, ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರ ಹುದ್ದೆಯ ನೇಮಕಾತಿಯನ್ನು ಮುಂದಿನ ಸಿಂಡಿಕೇಟ್ ಸಭೆಯೊಳಗೆ ಪೂರ್ಣಗೊಳಿಸಬೇಕೆಂದು ತಿಳಿಸಿದರು. |

| | | |
|---|---|---|
| | ಈ ಸಂಬಂಧ ಮಾತನಾಡಿದ್ದ ಮಾನ್ಯ ಕುಲಪತಿಗಳು, ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ಜಾಹೀರಾತನ್ನು ವಿಶ್ವವಿದ್ಯಾನಿಲಯದಿಂದ ಹೊರಡಿಸಲಾಗಿದ್ದು, ಡಿಸೆಂಬರ್ 2021ರ ಅಂತ್ಯದೊಳಗೆ ಸಂದರ್ಶನ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದೆಂದು ತಿಳಿಸಿದರು. |
| 17 | ಶ್ರೀ ಎಸ್.ಡಿ.ದೊಡ್ಡಚಾರಿಯವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪರೀಕ್ಷೆಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಿಂಡಿಕೇಟ್ ಸದಸ್ಯರುಗಳಿಗೆ ಒದಗಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| | ಮಾನ್ಯ ಕುಲಪತಿಯವರು ಮಾತನಾಡಿ, ಶೈಕ್ಷಣಿಕ ವೇಳಾಪಟ್ಟಿಯನ್ನು ಎಲ್ಲಾ ಸದಸ್ಯರುಗಳಿಗೂ ನೀಡಲಾಗುವುದೆಂದು ಸಮ್ಮತಿ ಸೂಚಿಸಿದರು. |

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಮತ್ತು ಅಧ್ಯಕ್ಷರು